**ಕರ್ನಾಟಕ ಸರ್ಕಾರ**
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/ವಿಯೋ/IITB/17/2014-15

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:08 -01-2016.

## ಸುತ್ತೋಲೆ

ವಿಷಯ: 2015-16ನೇ ಸಾಲಿನಲ್ಲಿ ಐಐಟಿ ಮುಂಬೈನವರು ನಡೆಸುತ್ತಿರುವ Spoken Tutorials ಕೋರ್ಸ್‌ಗೆ ನೋಂದಣಿ ಮಾಡಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆಯ ಕುರಿತು ಮಾಹಿತಿ ನೀಡುವ ಬಗ್ಗೆ.

ಉಲ್ಲೇಖ: 1) ಇಡಿ/407/ಯುಆರ್‌ಸಿ/2014(1) ದಿನಾಂಕ:15-10-2014.
2) ಕಾಶಿಇ/ವಿಯೋ/04/ಸುತ್ತೋಲೆ/2015-16 ದಿನಾಂಕ:12-06-2015.

******

National Mission on Education through Information Communication Technology (NMEICT) IIT ಯ ಭಾಗವಾದ ಹಾಗೂ ಮುಂಬೈನವರು ನಡೆಸುವ Spoken Tutorials ಕಾರ್ಯಕ್ರಮದಲ್ಲಿ ಕಂಪ್ಯೂಟರ್ ಮತ್ತು ಸಾಫ್ಟ್‌ವೇರ್‌ಗಳ ಬಳಕೆಯ ಕುರಿತು ಆನ್‌ಲೈನ್/ಆಫ್‌ಲೈನ್ ಮೂಲಕ ತರಬೇತಿ ಉಚಿತವಾಗಿ ನೀಡಲಾಗುತ್ತಿದ್ದು, ಉಲ್ಲೇಖ(1)ರ ಅನ್ವಯ ಈ ಯೋಜನೆಯ ಅಡಿಯಲ್ಲಿ ಲಭ್ಯವಿರುವ ವಿವಿಧ Free and Open Source Software ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ನೀಡಲು ಸೂಚಿಸಲಾಗಿತ್ತು. ಈ ಹಿನ್ನೆಲೆಯಲ್ಲಿ 2014-15ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿದ್ಯಾರ್ಥಿಗಳನ್ನು ನೋಂದಾಯಿಸಿ ಸದರಿ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗಿತ್ತು. 2015-16ನೇ ಸಾಲಿನಲ್ಲಿ ಈ ಮುಂದುವರಿಕೆ ಕಾರ್ಯಕ್ರಮವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪದವಿ ವಿದ್ಯಾರ್ಥಿಗಳಿಗೆ ಅನುಷ್ಠಾನಗೊಳಿಸುವಂತೆ ಉಲ್ಲೇಖ (2)ರ ಅನ್ವಯ ಇಲಾಖೆ ವತಿಯಿಂದ ಸುತ್ತೋಲೆ ಹೊರಡಿಸಲಾಗಿದೆ. ಅದರಂತೆ 2015-16ನೇ ಸಾಲಿನಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಆರು ಪ್ರಾದೇಶಿಕ ವಲಯಗಳಲ್ಲಿ ಸದರಿ ಕಾರ್ಯಕ್ರಮದ ಕೋಆರ್ಡಿನೇಟರ್‌ಗಳಿಗೆ ಈಗಾಗಲೇ IIT ಮುಂಬೈ ವತಿಯಿಂದ Spoken Tutorials ಕುರಿತ Sensitization Workshop ನಡೆಸಲಾಗಿದೆ.

➢ **ಕಾರ್ಯಕ್ರಮದ ಸ್ವರೂಪ:**

ಈ ಕಾರ್ಯಕ್ರಮದಲ್ಲಿ ಶ್ರೇಷ್ಠ ಆಡಿಯೋ-ವಿಡಿಯೋಗಳ ನೆರವಿನಿಂದ ಕಂಪ್ಯೂಟರ್ ಬಳಕೆಯನ್ನು ವಿವಿಧ ಹಂತಗಳಲ್ಲಿ **ಉಚಿತವಾಗಿ** ಕಲಿಯಬಹುದಾಗಿದೆ. ಇದು ವಿಶೇಷವಾಗಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು (MHRD) ರೂಪಿಸಿರುವ ಕಾರ್ಯಕ್ರಮವಾಗಿದ್ದು, ಇದರಲ್ಲಿ ಬಳಸಲಾಗುವ ಕಲಿಕೆಯ ಸಾಮಗ್ರಿ ಮತ್ತು ತಂತ್ರಾಂಶಗಳನ್ನು IIT ಮುಂಬೈ ಸಿದ್ಧಪಡಿಸಿದೆ. ಈ ಸ್ಪೋಕನ್ ಟ್ಯುಟೋರಿಯಲ್ Free and Open Source Software (FOSS) ಮೂಲಕ ಕಲಿಯಬಹುದಾದ ವಿವಿಧ ಕೋರ್ಸ್‌ಗಳೆಂದರೆ, ಲಿನಕ್ಸ್-ಉಬಂಟು (Linux-Ubuntu), ಲಿಬ್ರೆ ಆಫೀಸ್ (Libre Office), ರೈಟರ್ (Writer), ಕ್ಯಾಲ್ಕ್ (Calc), ಇಂಪ್ರೆಸ್ (Impress), ಬೇಸ್ (Base), ಡ್ರಾ (Draw), ಮ್ಯಾಥ್ (Math), PHP, MySQL, C/C++, Java, Netbeans, Python ಮತ್ತು ಸೈಲ್ಯಾಬ್ (Scilab).

## ➢ ಕಾರ್ಯಕ್ರಮದ ಉದ್ದೇಶ:

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪದವಿ/ಸ್ನಾತಕೋತ್ತರ ವಿದ್ಯಾರ್ಥಿಗಳು ಸ್ಪೋಕನ್ ಟ್ಯುಟೋರಿಯಲ್ ಮುಖಾಂತರ ಉಚಿತವಾಗಿ ಈ ತರಬೇತಿಯನ್ನು ಪಡೆಯಬಹುದು.

- C/C++, Java, Linux, Math, Python, Scilab, Calc.
- LibreOffice, Calc, Writer, PHP, MySQL, Impress, Draw & others.

ಈ ಕೋರ್ಸುಗಳು ವಿಶ್ವವಿದ್ಯಾಲಯಗಳ ಪಠ್ಯಕ್ರಮಕ್ಕೆ ಪೂರಕವಾಗಿದ್ದು, ವಿದ್ಯಾರ್ಥಿಗಳಿಗೆ ಈ ಕಲಿಕೆಯು ಪ್ರಯೋಜನಕಾರಿಯಾಗಿರುತ್ತದೆ. ಉದ್ಯೋಗಾರ್ಹತೆಯನ್ನು ಗಣನೀಯವಾಗಿ ಹೆಚ್ಚಿಸಿ, ಸರ್ಕಾರಿ ಮತ್ತು ಖಾಸಗಿ ವಲಯಗಳ ಉದ್ಯೋಗಗಳಿಗೆ ಕೌಶಲ್ಯಯುತ ಅಭ್ಯರ್ಥಿಗಳನ್ನು ಒದಗಿಸುವಲ್ಲಿ ನೆರವಾಗುತ್ತದೆ.

## ➢ ಕಾರ್ಯಕ್ರಮದ ಉದ್ದೇಶಿತ ಪ್ರಯೋಜನ:

ಈ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಅನ್ವಯಿಸುವುದರಿಂದ ಹಿಂದುಳಿದ, ಅಲ್ಪಸಂಖ್ಯಾತ, ಮಹಿಳಾ ಮತ್ತು ಎಲ್ಲಾ ವಿದ್ಯಾರ್ಥಿಗಳಿಗೆ ಏಕರೂಪವಾಗಿ ಉತ್ತಮ ಗುಣಮಟ್ಟದ ಕಂಪ್ಯೂಟರ್ ಶಿಕ್ಷಣವನ್ನು ದೂರ ಸಂವಹನೆಯ ಮೂಲಕ ಒದಗಿಸಲಾಗುವುದು. ಇದರಿಂದಾಗಿ ರಾಜ್ಯಾದ್ಯಂತ ಪದವಿ ವಿದ್ಯಾರ್ಥಿಗಳ ಕಂಪ್ಯೂಟರ್ ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಲು ನೆರವಾಗುವುದು. ಈ ಕಾರ್ಯಕ್ರಮವು ವಿದ್ಯಾಥಿಗಳ ಉದ್ಯೋಗಾರ್ಹತೆಯ ಸಾಧ್ಯತೆಯನ್ನು ಹೆಚ್ಚಿಸುವುದು.

ಇದನ್ನು ಅನುಸರಿಸಿ, 2015-16ನೇ ಸಾಲಿನಲ್ಲಿ ಪ್ರತಿ ಕಾಲೇಜಿನಿಂದ ಐಐಟಿ ಮುಂಬೈನವರು ನಡೆಸುವ Spoken Tutorials ಕಾರ್ಯಕ್ರಮದಲ್ಲಿ ಯಾವ ಯಾವ ಕೋರ್ಸ್‌ಗೆ ಎಷ್ಟು ಜನ ವಿದ್ಯಾರ್ಥಿಗಳು ನೋಂದಾಯಿತರಾಗಿದ್ದಾರೆ ಮತ್ತು ಒಟ್ಟು ಎಷ್ಟು ವಿದ್ಯಾರ್ಥಿಗಳು ನೋಂದಾಯಿತರಾಗಿದ್ದಾರೆ ಎನ್ನುವ ಮಾಹಿತಿ ತುರ್ತಾಗಿ ಬೇಕಾಗಿದ್ದು, ಈ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿ, ಇದರ ಸಾಫ್ಟ್ ಪ್ರತಿಯನ್ನು ದಿನಾಂಕ:10-01-2016ರೊಳಗೆ spokentutorial.dce@gmail.comಗೆ ಕಳಿಸಿಕೊಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು.

**ಇವರಿಗೆ:**

ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು:**

1) ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಧಾರವಾಡ, ಗುಲ್ಬರ್ಗಾ, ಮಂಗಳೂರು ಮತ್ತು ಶಿವಮೊಗ್ಗ – ಮಾಹಿತಿಗಾಗಿ.
2) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕಾಶಿಇ, ಬೆಂಗಳೂರು – ಇಲಾಖಾ ವೆಬ್ ಸೈಟಿನಲ್ಲಿ ಪ್ರಕಟಿಸಲು.
3) ಕಛೇರಿ ಪ್ರತಿ.

# SPOKEN TUTORIAL 2015-16

**Details of students registered for Spoken Tutorial Course offered by IIT Mumbai**

Name of the College:

Mobile No:

Name of the Principal:

Email ID:

Name of the Coordinator:

| Sl. No. | Name of the Course | No. of students registered |
|---|---|---|
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |
| | | |